**ಓ.ಎಸ್. ನಂ. 04/ 2023** **ಪಿ ಡಬ್ಲ್ಯೂ – 1**

**ದಿನಾಂಕಃ 23.07.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ – ವಾದಿ ಪರ ವಕೀಲರಿಂದ**

ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು, ಅದರಲ್ಲಿರುವ ಸಂಗತಿಗಳೆಲ್ಲಾ ಸತ್ಯವಿದ್ದು, ಅದನ್ನು ನಾನೇ ಹೇಳಿ ಬರೆಸಿದ್ದೇನೆ ಹಾಗೂ ಪ್ರಮಾಣ ಪತ್ರಕ್ಕೆ ನಾನೇ ಸಹಿ ಮಾಡಿರುತ್ತೇನೆ.

ಪ್ರತಿವಾದಿಗಳು ನನಗೆ ಮತ್ತು 1 ನೇ ವಾದಿಗೆ ಬರೆದುಕೊಟ್ಟ ಸ್ವಾದೀನ ರಹಿತ ಕ್ರಯದ ಒಪಂದ ಕರಾರಿನ ನೊಂದಾಯಿತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ –1 ಎಂದು ಗುುರತಿಸಲಾಯಿತು. ನಾವು ವಾದಿಗಳು ಮತ್ತು ಪ್ರತಿವಾದಿಗಳು ನಿಪಿ – 1ಕ್ಕೆ ಸಹಿ ಮಾಡಿರುತ್ತೇವೆ. ಸಾಕ್ಷಿಯಾಗಿ ಮಹದೇವಸ್ವಾಮಿ ಮತ್ತು ಶಿವಪ್ರಕಾಶ್ ರವರು ಸಹಿ ಮಾಡಿದ್ದಾರೆ. ಒಂದು ಪಹಣಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ –2 ಎಂದು, ಪ್ರತಿವಾದಿಗಳಿಗೆ ಕಳುಹಿಸಿದ ನೋಟಿಸಿನ ಕಛೇರಿ ಪ್ರತಿಯನ್ನು ಹಾಜರುಪಡಿಸಿದ್ದು, ನಿಪಿ –3 ಎಂದು, ಅಂಚೆ ರಶೀದಿಗಳನ್ನು ನಿಪಿ–3(ಎ) ರಿಂದ (ಜೆ) ಎಂದು ಗುರುತಿಸಲಾಯಿತು. ಅಂಚೆ ಸ್ವೀಕೃತಿ ಪ್ರತಿಗಳನ್ನು ನಿಪಿ – 4 ರಿಂದ ನಿಪಿ–10 ಎಂದು ಗುುರತಿಸಲಾಯಿತು. ಹಿಂದುರುಗಿ ಬಂದ ನೋಟಿಸಿನ ಕವರನ್ನು ನಿಪಿ–11 ರಿಂದ ನಿಪಿ–13 ಎಂದು, ಅದರೊಳಗೆ ಇರುವ ನೋಟಿಸನ್ನು ನಿಪಿ –11(ಎ) ರಿಂದ 13(ಎ) ಎಂದು ಗುರತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಸುನೀತ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ. ಕೊಳ್ಳೇಗಾಲ.